INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,83-91
Peer -Reviewed, Refereed Journal

# ಮಧ್ಯಕಾಲೀನ ಕೈಗಾರಿಕೆಯಾಗಿ ಕಮ್ಮಾರಿಕೆ

ಡಾ. ಸಿದ್ಧಲಿಂಗಮ್ಮ ಬಿ.ಜಿ.[1]

ಆಧುನಿಕ ಪೂರ್ವಕಾಲದ ಕರ್ನಾಟಕದ ಆಚಾರಿಗಳು ಅಥವಾ ಓಜರು ಕಲ್ಲಿನ ಕೈಗಾರಿಕೆ, ಮರಗೆಲಸ, ಕಂಚುಗಾರಿಕೆ, ಕಮ್ಮಾರಿಕೆ, ಚಿನ್ನ/ಬೆಳ್ಳಿಯ ಕೈಗಾರಿಕೆ ಎಂಬ ಐದು ವಿಧವಾದ ಕೈಗಾರಿಕೋದ್ಯಮದಲ್ಲಿ ತೊಡಗಿದ್ದರು. ಈ ಕೈಗಾರಿಕೆಯ ಕಮ್ಮಾರಿಕೆಯಲ್ಲಿ ತೊಡಗಿದವರನ್ನು ಪ್ರತ್ಯೇಕವಾಗಿ ಗುರುತಿಸುವುದು ಈ ಪ್ರಬಂಧದ ಉದ್ದೇಶವಾಗಿದೆ. ಶಾಸನಗಳು ಹಾಗೂ ಸಾಹಿತ್ಯದಲ್ಲಿ ದೊರೆಯುವ ಅಲ್ಪಸ್ವಲ್ಪ ಆಕರವನ್ನು ಬಳಸಿಕೊಂಡು ಪ್ರಬಂಧ ರಚಿಸಲಾಗಿದೆ. ಇವರನ್ನು ಶಾಸನಗಳಲ್ಲಿ ಕಮ್ಮಾರ[1], ಕಮ್ಮರ[2], ಕಂಮಾಕಾರ[3], ಕಮ್ಮಾರರೊಕ್ಕಲು[4] ಎಂದೆಲ್ಲ ಸೂಚಿಸಲಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ (ಧರ್ಮಾಮೃತ, ವಚನಗಳು) ಅಪರೂಪಕ್ಕೊಮ್ಮೆ ಇವರ ಉಲ್ಲೇಖ ಬರುತ್ತದೆ.

ಕಮ್ಮಾರಿಕೆ ಕುರಿತು ಈವರೆಗೆ ಕೆಲ ಅಧ್ಯಯನಗಳು ಬಂದಿವೆ. ಅವುಗಳಲ್ಲಿ ಇವರ ಕುರಿತು ಬರೆಯುವವರೆಂದರೆ ಡಾ.ಎಂ.ಚಿದಾನಂದಮೂರ್ತಿ, ಡಾ.ಗುರುರಾಜಾಚಾರ್, ಆರ್.ಗೋಪಾಲ, ಹನುಮನಾಯಕ, ಡಾ.ಕೆ.ಎಸ್.ಕುಮಾರಸ್ವಾಮಿ ಮೊದಲಾದವರು ಈ ಕುರಿತು ಸಾಂದರ್ಭಿಕವಾಗಿ ಬರೆದಿದ್ದಾರೆ.

ಕಮ್ಮಾರರೂ, ಅಕ್ಕಸಾಲಿಗಳೂ, ಬಡಗಿಗಳೂ, ಕಂಚುಗಾರರೂ ಇದೇ ವಿಶ್ವಕರ್ಮ ಕುಲಕ್ಕೆ ಸೇರಿದವರು. ಇವರಲ್ಲಿ ಅಕ್ಕಸಾಲಿಗಳು ಚಿನ್ನದ ಕೆಲಸವನ್ನು ಮಾಡುವವರು, ಅಪರೂಪವಾಗಿ ಶಾಸನಗಳನ್ನು ಕೆತ್ತುತ್ತಿದ್ದುದೂ ಉಂಟು. ಕಬ್ಬಿಣದ ಕೆಲಸಗಳನ್ನು ಮಾಡುತ್ತಿದ್ದವರು ಕಮ್ಮಾರರು (ಕರ್ಮಹರ, ಕಂಬರ, ಕಮ್ಮರ, ಕಂಬಾರ ಎಂದು ಕನ್ನಡದ ಪ್ರಾಚೀನ ಶಾಸನ, ಕಾವ್ಯ, ವ್ಯಾಕರಣಗಳಲ್ಲಿ ಕಾಣಿಸಿಕೊಂಡಿದೆ. ಕಬ್ಬೊನ್, ಕರ್ವೊನ್ ಎಂದರೆ ಕಬ್ಬಿಣ ಕಮ್ಮಟ ಎಂದರೆ ಕುಲುಮೆ ಕರ್ಮ+ಕಾರ ಕಮ್ಮಾರ ಆಗಿದೆ. ಈಗ ಬಳಕೆಯಲ್ಲಿ ಕಮ್ಮಾರ ಮತ್ತು ಕಂಬಾರ ಎರಡೂ ರೂಪಗಳು ಬಳಕೆಯಲ್ಲಿವೆ). ಮರದ ಕೆಲಸಗಳನ್ನು ಮಾಡುವವನು ಬಡಗಿ (ಸಂ.ವರ್ಧಕಿ) ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನ್ನು ಮಾಡಲು, ಮುರಿದು ಹೋದ ಸಾಮಾನುಗಳನ್ನು ಸರಿಪಡಿಸಲು ಇವರಿಗೆ ಶಾಶ್ವತವಾದ ದತ್ತಿಗಳನ್ನು ಬಿಟ್ಟುಕೊಡುತ್ತಿದ್ದರು. ಇವರೂ ಅನೇಕ ಶಾಸನಗಳನ್ನು ಕೆತ್ತಿದ್ದಾರೆ. ಇದನ್ನು ನೋಡಿದರೆ ಶಿಲ್ಪಿ,

---

[1]. ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ.

ಕಮ್ಮಾರ, ಅಕ್ಕಸಾಲೆ ಮತ್ತು ಬಡಗಿಗಳು ಪರಸ್ಪರರ ವೃತ್ತಿಗಳನ್ನವಲಂಬಿಸಲು ಅವಕಾಶವಿದ್ದಂತೆ ಊಹಿಸಬಹುದು.

**ಕಮ್ಮಾರ ಸಮಾಜ:**

ಕಮ್ಮಾರರ ಸಮಾಜದ ಕುರಿತು ನಮಗೆ ಸಿಗುವ ಮಾಹಿತಿಗಳಲ್ಲಿ ಅವರು ತಮ್ಮನ್ನು ಕರ್ಮ್ಮಾರಕುಳ[5] ಎಂದು ಬಣ್ಣಿಸಿಕೊಂಡ ಸಂದರ್ಭಗಳು.

**ಕಂಬಾರಗೇರಿ:** ಕಮ್ಮಾರ ಅಥವಾ ಕಂಬಾರ ವಾಸ ಮಾಡುವ ಓಣಿಗೆ ಕಂಬಾರಗೇರಿ[6] ಎಂದು ಕರೆಯುತ್ತಿದ್ದರು.

ಬೇರೆ ಬೇರೆ ಕುಲಗಳವರು ಊರಿನ ಬೇರೆ ಬೇರೆ ಭಾಗಗಳಲ್ಲಿ ಒಟ್ಟೊಟ್ಟಿಗೆ ವಾಸಿಸುತ್ತಿದ್ದರು. ಕಮ್ಮಾರರು ಕಮ್ಮಾರರ ಬೀದಿಯಲ್ಲಿ, ಬ್ರಾಹ್ಮಣರು ಬ್ರಹ್ಮಪುರಿಗಳಲ್ಲಿ, ಪುಲಿಗೆರೆಯಲ್ಲಿ ಪಟ್ಟಗಾರರು ಮೂರು ಕೇರಿಗಳಲ್ಲಿ, ಹರಿಜನರು ಊರ ಹೊರಗಡೆ ಹೊಲೆಗೇರಿಯಲ್ಲಿ ವಾಸಿಸುತ್ತಿದ್ದರು ಎಂದು ಚಿದಾನಂದಮೂರ್ತಿಯವರು[7] ಉಲ್ಲೇಖಿಸುತ್ತಾರೆ.

**ಕಮ್ಮಾರ ಒಕ್ಕಲು**

ಕಮ್ಮಾರರ ಕೇರಿಯಲ್ಲಿ ಇರುತ್ತಿದ್ದ ಕಮ್ಮಾರರನ್ನು ಒಕ್ಕಲುಗಳೆಂದು ಕರೆಯಲಾಗಿದೆ. ಇಲ್ಲಿ ಒಕ್ಕಲು ಎಂಬ ಶಬ್ದ ಕಬ್ಬಿಣ ಕೆಲಸ ಮಾಡುತ್ತಿದ್ದ ಕಮ್ಮಾರರನ್ನು ಸೂಚಿಸುತ್ತದೆ ಎಂಬುದು 'ಅಕ್ಕಸಾಲಿ ಬಡಗಿ ಕಮ್ಮಾರರೊಕ್ಕಲದೊಂದು ತೆನೆಯ ಹೊರೆ ಹೆಡಗೆಯಲುಪ್ಪು ಮಾನ 1 ನೂಲಪರ್ವ್ವಕ್ಕೆ ಯೊಕ್ಕಲದೊಂದು'[8], 'ಬಡಗಿ ಕಮ್ಮಾರರು ವೊಕ್ಕಲಲೊನ್ದು ಹೊರೆಯಮಂ ಹನ್ನ ಸುಂ ಧಾನ್ಯದಲು ಬಳ್ಳವೊನ್ದುಮಂ ಬಿಟ್ಟರು'[9] ಮೊದಲಾದ ಶಾಸನೋಲ್ಲೇಖಗಳಿಂದ ಗೊತ್ತಾಗುತ್ತದೆ.

**ಉತ್ಪಾದನೆ**

ಕಬ್ಬಿಣ ಕೈಗಾರಿಕೆಯಲ್ಲಿ ತೊಡಗಿದ್ದ ಕಮ್ಮಾರರು ದೇಶದ ಎರಡು ಬಹಳ ಮುಖ್ಯವಾದ ಅಗತ್ಯಗಳನ್ನು ತುಂಬಿಕೊಡುತ್ತಿದ್ದರು.

1. ವ್ಯವಸಾಯೋಪಯೋಗಿ ಉಪಕರಣಗಳು ಹಾಗೂ ಗೃಹೋಪಯೋಗಿ ಉಪಕರಣಗಳ ತಯಾರಿಕೆ.

2.ಯುದ್ಧೋಪಕರಣಗಳ ತಯಾರಿಕೆ.

ಇವುಗಳಲ್ಲಿ ಮೊದಲನೆಯ ಗುಂಪಿಗೆ ಸೇರಿದ ಕುಡುಗೋಲು, ಹಾರೆ, ಗುದ್ದಲಿ, ಸಲಿಕೆ, ಕುಳ ಮೊದಲಾದ ವ್ಯವಸಾಯೋಪಯೋಗಿ ಉಪಕರಣಗಳನ್ನು ಹಳ್ಳಿಯ ಮಟ್ಟದಲ್ಲಿ ಆಯಾ ಹಳ್ಳಿಗಳಲ್ಲಿದ್ದ ಕಮ್ಮಾರರು ಸಣ್ಣ ಪ್ರಮಾಣದಲ್ಲಿ ತಯಾರಿಸಿಕೊಡುತ್ತಿದ್ದರು. ಇದು ಗುಡಿಕೈಗಾರಿಕೆಯ ಮಾದರಿಯಲ್ಲಿ ನಡೆಯುತ್ತಿದ್ದಿರಬಹುದು. ಈ ಕಮ್ಮಾರರನ್ನು ಗ್ರಾಮಸ್ಥರು ಆಯಗಾರರಲ್ಲಿ ಒಬ್ಬನೆಂದು ಪರಿಗಣಿಸಿ ವಾರ್ಷಿಕ ಆಯವನ್ನು ಕೊಟ್ಟ ಉಲ್ಲೇಖಗಳು ಶಾಸನಗಳಲ್ಲಿ ಅಲ್ಲಲ್ಲಿಯೇ ಕಂಡುಬರುತ್ತವೆ.

ಅಷ್ಟೇ ಅಲ್ಲದೆ ಎರಡನೆಯದಾಗಿ ಕಮ್ಮಾರಿಕೋದ್ಯಮವು ಸಾಂಸ್ಥಿಕವಾಗಿ, ಸುಸಂಘಟಿತವಾಗಿ ಬೆಳೆದಿರಲಿಕ್ಕೂ ಸಾಧ್ಯ. ಏಕೆಂದರೆ ಆಗಿನ ಕಾಲದಲ್ಲಿ ರಾಜ ಮಹಾರಾಜರು ಸದಾ ಯುದ್ಧ ಮಾಡುವುದರಲ್ಲಿ ತೊಡಗಿರುತ್ತಿದ್ದುದು ನಮಗೆಲ್ಲ ತಿಳಿದ ವಿಷಯವೇ ಆಗಿದೆ. ಯುದ್ಧಗಳಲ್ಲಿ ಸಹಜವಾಗಿ ಅನೇಕ ವಿಧವಾಗಿ ಆಯುಧಗಳು, ಕವಚಗಳು, ಬಳಕೆಯಾಗುತ್ತಿದ್ದವು. ಡಾ. ಚಿದಾನಂದ ಮೂರ್ತಿಯವರು[10] ಕರವಾಳ್, ತೋಲವಾಳ್ ಎಂಬ ಕತ್ತಿಗಳನ್ನೂ, ಕಡಿತಲೆ ಎಂಬ ಖಡ್ಗಗಳನ್ನು, ಸಬಳ, ಕೊಂತ, ಶಲ್ಯ, ಭಲ್ಯ, ಶೂಲ, ಕರ್ಕಡೆ, ಸುರಿಗೆ, ಮುಸಲ, ಬಿಂಡಿವಾಳ, ಈಟಿ, ಶಕ್ತಿ, ಪಂಚರಾಯುಧ್ಧ, ತೋಮರ, ಮುಸುಂಡಿ, ಮುದ್ಗರ ಮೊದಲಾದ ಯುದ್ಧಾಯುದ್ಧಗಳ ದೀರ್ಘವಾದ ಪಟ್ಟಿಯನ್ನು ಕೊಡುತ್ತಾರೆ.

ಈ ಆಯುಧಗಳ ತಯಾರಿಕೆಯು ಗೊತ್ತಾದ ಲೆಕ್ಕಾಚಾರದಲ್ಲಿ ನಡೆಯುತ್ತಿದ್ದು, ನಿಷ್ಣಾತರಾದ, ಯುದ್ಧವಿದ್ಯೆಯನ್ನು ಬಲ್ಲ ಕಮ್ಮಾರರಿಂದಲೇ ರಚನೆಯಾಗುತ್ತಿದ್ದವೆಂದು ಊಹಿಸಬಹುದು. ಬಾಗಳಿಯ ಶಾಸನವೊಂದು ಹೀಗೆ ಉಲ್ಲೇಖಿಸುತ್ತದೆ.[11] 'ಬಾಗುಳಿಯ ಬೈ..ನ. ಕಮ್ಮಾರ ಕೊಂಗುಣಿ ಆಚಾರಿಯ ಮಗಂ ಕೊನ್ನಾಚರಿ ನಾಡಾಳಿವನೊಡನೆ ಕಾಳಗಕ್ಕೆ ಕಾದಿ ಸ್ವರ್ಗಸ್ತನಾದಂ॥' ಎಂದು ಉಲ್ಲೇಖಿಸುವುದರಿಂದ ಕಮ್ಮಾರರು ಕೂಡ ಯುದ್ಧವಿದ್ಯೆಯನ್ನು ಬಲ್ಲವರಾಗಿದ್ದರೆಂದು ತಿಳಿಯಬಹುದು.

ಕ್ರಿ.ಶ.11ನೇ ಶತಮಾನದ ಮೈಸೂರಿನ ಶಾಸನ[12] ವು ಬಲ್ಲಸಿಯಾ ಎಂಬುವನು ಕತ್ತಿಗಳನ್ನು ತಯಾರಿಸುತ್ತಿದ್ದುದಾಗಿಯೂ ಅವನು ಖಡ್ಗಾದಿ ಶಸ್ತ್ರಗಳನ್ನು ಬಲ್ಲವನಾಗಿದ್ದನೆಂದೂ ತಿಳಿಸುತ್ತದೆ.

ಕಮ್ಮಾರಿಕೆಯ ಕುರಿತಾಗಿ ಸ್ಪಷ್ಟ ಉಲ್ಲೇಖಗಳು ಶಾಸನಗಳಲ್ಲಿ ಇಲ್ಲದಿರುವುದು ಒಂದು ಕೊರತೆಯಾಗಿದೆ. ಶಾಸನಗಳ ಈ ಕೊರತೆಯನ್ನು ತುಂಬಿಕೊಳ್ಳುವುದಕ್ಕಾಗಿ ನಾವು ಕನ್ನಡ ಸಾಹಿತ್ಯವನ್ನು ನೋಡಬೇಕಾಗುತ್ತದೆ.

'ಊದುವ ತಿದಿಯಂತೆ ಪೊಂಗಿರ್ದ ಪುಣ್ಗಳುಂ'[13] ಎಂಬ ನಯಸೇನನ ಮಾತಿನಿಂದ ಅವರು ಉಪಯೋಗಿಸುತ್ತಿದ್ದ ತಿದಿಯ ಬಗೆಗೂ ತಿಳಿದುಬರುತ್ತದೆ. ಒಲೆಯಲ್ಲಿ ಕರ್ಬೊನ್ನನ್ನು ಕಾಸಿ ಇರ್ಕುಳಿನಿಂದ ಹಿಡಿದು ಸುತ್ತಿಗೆಯಿಂದ ಕಮ್ಮಾರರು ಬಡಿಯುತ್ತಿದ್ದರು(3–73,77), 'ಕರ್ಬುನಂ ಎನಿಸುಕಾಯ್ದು ಮೃದುವಾದೊಡಂ ಕಮ್ಮರರಿಲ್ಲದೆ ಖಡ್ಗಾದಿ ಶಸ್ತ್ರಂಗಳಾಗವು' ಎಂಬ ನಯಸೇನನ ಮಾತು(7–47) ಬಹಳ ಗಮನಾರ್ಹವಾಗಿದೆ. ಇದರಿಂದ ಅವರು ರಾಜರಿಗಾಗಿ, ಸೈನಿಕರ ಉಪಯೋಗಕ್ಕೆ ಬೇಕಾಗುವ ಶಸ್ತ್ರಾದಿಗಳನ್ನು ಸಿದ್ಧಪಡಿಸುತ್ತಿದ್ದರೆಂಬುದು ವಿದಿತವಾಗುತ್ತದೆ.

ಯುದ್ಧದ ಸಮಯದಲ್ಲಿ ರಾಜನ ಸೈನ್ಯಕ್ಕೆ ಬೇಕಾಗುವ ಬಾಣ, ಬರ್ಚಿ ಮೊದಲಾದ ಆಯುಧಗಳನ್ನು ಸಿದ್ಧಪಡಿಸುತ್ತಿದ್ದ ಈ ಕಮ್ಮಾರರು, ಒಕ್ಕಲಿಗರ ಬೇಸಾಯಕ್ಕೆ ನೆರವಾದಂತೆ, ರಾಜ್ಯ

ರಕ್ಷಣೆಗೂ ನೆರವಾಗುತ್ತಿದ್ದರು. ರಾಜರು ಇವರಿಗೆ ವೇತನಗಳನ್ನು ಕೊಡುತ್ತಿರಬೇಕು. ಒಕ್ಕಲಿಗರಂತೂ ಆಯವನ್ನು ಕೊಡುತ್ತಿದ್ದರು.

ಕಬ್ಬಿಣವನ್ನು ಕೆಂಪಗೆ ಕಾಯಿಸಿ, ಬಡಿದು ತನಗೆ ಬೇಕಾದ ಆಕಾರಕ್ಕೆ ತಿರುಗಿಸುತ್ತಿದ್ದ ಬೆಂಕಿಯನ್ನು ಪಟುಗೊಳಿಸುವುದಕ್ಕಾಗಿ ಗಾಳಿಯನ್ನೂದುವ ತಿದಿಯು ಆಗಲೂ ಕಮ್ಮಾರರಲ್ಲಿ ಬಳಕೆಯಲ್ಲಿತ್ತು. ಭೀಮನು ಮದಗಜಗಳ ಬಾಲವನ್ನು ಹಿಡಿದೆತ್ತಿ ಒತ್ತುವಾಗ ಅವುಗಳ ಮುಖದಿಂದ ಸುರಿಯುವ ರಕ್ತವು ಕಮ್ಮಾರನು ತಿದಿಯೊತ್ತಿದಾಗ, ಉರಿಯುವ ಬೆಂಕಿಯ ಹಾಗೆ ಕಾಣಿಸುತ್ತಿತ್ತೆಂದು 'ಶಬ್ದಮಣಿದರ್ಪಣಂ' ಪ್ರಯೋಗ ಪದ್ಯವು ವರ್ಣಿಸುತ್ತದೆ.[14] ಕಾಸಿದ ಕಬ್ಬಿಣಕ್ಕೆ ನೀರನ್ನು ಹಾಕಿದಾಗ ನೀರು ಇಂಗಿ ಹೋಗುವ ರೀತಿಯು ಕೆಲವು ವಚನಗಳಲ್ಲಿ ಉಪಮೆಯಾಗಿ ಬಳಸಲ್ಪಟ್ಟಿದೆ.[15] ಕಬ್ಬಿಣದಿಂದ ಲಿಂಗಗಳನ್ನು ತಯಾರಿಸುತ್ತಿದ್ದ ಸ್ವಾರಸ್ಯಕರ ಅಂಶ ಕೆಲವು ವಚನಗಳಲ್ಲಿ ಉಲ್ಲೇಖಗೊಂಡಿದೆ.[16]

**ಕರ್ಮ್ಮಾರ ದ್ವಿಜರು:**

ಕ್ರಿ.ಶ.967ರ ಬಳ್ಳಾರಿ ಜಿಲ್ಲೆಯ ಕೊಳಗಲ್ಲು ಶಾಸನವು[17] ಕೊಳಗಲ್ಲಿನಲ್ಲಿ ಬ್ರಹ್ಮಚಾರಿ ಗಧಾದರನು ಕಾರ್ತಿಕೇಯನನ್ನು ಹಾಗೂ ಇತರ ದೇವತೆಗಳನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಇವನು ಕಾರ್ತಿಕೇಯ ವಿಗ್ರಹ ಮತ್ತು ಅದರ ಪೀಠವನ್ನು ಚಿನ್ನದಲ್ಲಿ ಮಾಡಿಸಿದ್ದ. ಗಧಾದರನು ಕರ್ಮ್ಮಾರ ಕುಲದವನಾಗಿದ್ದು ಶಾಂಡಿಲ್ಯ ಗೋತ್ರದವನು, ಗೌಡ ದೇಶದ ಮಣಿಯಂತಿದ್ದ. ವರೇಂದ್ರಿ ಪ್ರದೇಶವನ್ನು ಬೆಳಗಿದವನು. ಇವನು ಸೂರ್ಯ, ಬ್ರಹ್ಮ, ವಿಷ್ಣು, ಶಿವ, ಪಾರ್ವತಿ, ವಿನಾಯಕ ದೇವರನ್ನು ಪ್ರತಿಷ್ಠಾಪಿಸಿ, ಕೆರೆಯನ್ನು, ಬಾವಿಗಳನ್ನು ಸತ್ರಗಳನ್ನು ಕಟ್ಟಿಸಿದನು ಎಂದು ವಿವರಿಸುತ್ತ ಶ್ರೀ ಕರ್ಮಾರ ಕುಲಾಹ್ವಯ ದ್ವಿಜ ವರ ಗ್ರಾಮಸ್ತುಎಂದು ಉಲ್ಲೇಖಿಸುತ್ತದೆ. ಕ್ರಿ.ಶ.971 ರ ಕುಡಿತಿನಿ ಶಾಸನವು[18] 'ಶ್ರೀ ಕರ್ಮ್ಮಾರಕುಳಾಹ್ವಯದ್ವಿಜವರ ಗ್ರಾಮಸ್ಯ ತತ್ಕಾರಿತೋ ನಿಷ್ಕ್ರಮ್ಯ ಕ್ರಮನಿರ್ಮಳ' ಎಂದೂ ಉಲ್ಲೇಖಿಸುವುದು ಕರ್ಮ್ಮಾರರು ತಮ್ಮನ್ನು 'ದ್ವಿಜ' ಎಂದು ಕರೆದುಕೊಂಡಿದ್ದು ಮೇಲಿನೆರಡು ಶಾಸನದಿಂದ ಗೊತ್ತಾಗುತ್ತದೆ. ಉಪನಯನದಂಥಹ ಸಂಸ್ಕಾರಗಳಾದಾಗ ಮಾತ್ರ ದ್ವಿಜರು ಎಂದು ಕರೆಯುವುದರಿಂದ ಇವರೂ ಕೂಡ ಉಪನಯನ ಮೊದಲಾದ ಸಂಸ್ಕಾರಗಳನ್ನು ಆಗಿನ ಕಾಲದಲ್ಲಿ ರೂಢಿಸಿಕೊಂಡಿದ್ದು ಗೊತ್ತಾಗುತ್ತದೆ. ಹಾಗೂ ಸಾಧಾರಣವಾಗಿ ವಿಶ್ವಕರ್ಮರಲ್ಲಿ ಈಗಲೂ ಕೂಡ ಈ ಪದ್ಧತಿ ಇದೆ. ಇದು ಈ ಶಾಸನಗಳೆರಡರ ವಿಶೇಷ.

**ಕಮ್ಮಾರ ವೀರರು**

ಕ್ರಿ.ಶ. 1138ರ ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ ಮತ್ತೂರ ಶಾಸನವು[19] 'ಸ್ವಸ್ತಿ ಶ್ರೀಮತು ಚಾಳುಕ್ಯ ಭೂಲೋಕ ವರ್ಷದ 6 ರೆಸಿಯ ಕಾಳಯುಕ್ತ ಸಂವತ್ಸರದ ಪುಸ್ಯ ಸು 5 ಅದಿವಾರದಂದು ಮುತ್ತೂರ ಕಮ್ಮನವಳ್ಳಿಯ ಜಕ್ಕಿಸೆಟ್ಟಿ ಊರನಳೆದು ಪೆಂಡಿರುಡೆಯುಚ್ಚಲು ಕಮ್ಮಾರ ಮಾಚ ತಳುತಿರದು ಸುರಲೋಕ ಪ್ರಾಪ್ತನಾದ॥' ಅಂದರೆ ಕಮ್ಮನವಳ್ಳಿಯ ಜಕ್ಕಿಸೆಟ್ಟಿಯು ಊರಿನ ಮೇಲೆ

ದಾಳಿ ಮಾಡಿ ಹೆಂಗಸರ ಮಾನ ಹಾನಿ ಮಾಡುತ್ತಿದ್ದ ಸಮಯದಲ್ಲಿ ಕಮ್ಮಾರ ಮಾಚನು ಕೆಲವರನ್ನು ಕೊಂದು ತಾನು ಸತ್ತ ವಿಷಯವನ್ನು ತಿಳಿಸುತ್ತದೆ. ಮಾಚನು ಮರಣ ಹೊಂದಲು ಅವನ ಮನೆತನದ ನಿರ್ವಹಣೆಗಾಗಿ ಆ ಊರಿನ ಗೌಡರು ಭೂಮಿ ದಾನ ಬಿಟ್ಟಿರುವುದನ್ನು ಸಹ ಶಾಸನ ಮುಂದುವರಿಯುತ್ತ ತಿಳಿಸುತ್ತದೆ.

ಸೊರಬ ತಾಲ್ಲೂಕಿನ ಕುಣಿತೆಪ್ಪದ ಕ್ರಿ.ಶ.1249 ರ ಶಾಸನವು[20] 'ಸ್ವಸ್ತಿಶ್ರೀ ಯಾದವನಾರಾಯಣಂ ಭುಜ ಬಳ ಪ್ರತಾಪ ಚಕ್ರವರ್ತಿ ಶ್ರೀ ಕಂನಹಸದೇವ ವರ್ಷದ 3 ನೆಯ ಸವಮ್ಯಸವತ್ಸರದ ಜೇಷ್ಠ ಬ 13 ಬುಧವಾರದಂದು....... ತ್ರಿಭುವನಮಲ್ಲಹಾಯಗ ಬೇಟೆಕಾರ ಹರಿಯವ ಸೆಟ್ಟಿಯ ಬೆಸವಗ ಕುಳಿಯ ತೆಪ್ಪವ ಕಂಮಾರ ಮಲೋಜ ನಮಗ ಭೊಮೋಜನು ಬೇಂಟೆಗೆ ಹೋದಲಿ ಹಂದಿ ಮೇಲವಾಯಿದಡೆ ಸುರಗಿರುದುಮೆರದು ಸುರಲೋಕ ಪ್ರಾಪ್ತನಾದ' ಅಂದರೆ ಕಂಮಾರ ಮಲೋಜನ ಮಗ ಭೊಮೋಜನೆಂಬುವವನು ಬೇಟೆಗೆ ಹೋದಾಗ ಅವನು ಕಾಡುಹಂದಿಯ ಜೊತೆಯಲ್ಲಿ ಹೋರಾಡುವಾಗ ಹಂದಿ ಹಾಯ್ದು ಮರಣ ಹೊಂದಿರುವುದನ್ನು ಉಲ್ಲೇಖಿಸುತ್ತದೆ.

ಸೊರಬ ತಾಲ್ಲೂಕಿನ ಬಿಳೇಗೋಡು[21] ವಿನಲ್ಲಿರುವ ಒಂದು ವೀರಗಲ್ಲಿನ ಪಾಠದಿಂದ ಬೇಟೆಗೆ ಹೋದಲ್ಲಿ ಕಮ್ಮಾರ ಕಸಬನು ತಳ್ತಿರುದು ಹಲರುಂ ಕೊಂದು ಸುರಲೋಕಕ್ಕೆ ಹೋದನೆಂದು ಹೇಳಿದೆ. ಕ್ರಿ.ಶ.1179ರ ಮೂಡಗೆರೆಯ ಶಾಸನ[22] ಬಮ್ಮಣ ಎಂಬುವವನು ಆನೆಯ ಮಸ್ತಕವನಿರಿದು ಸತ್ತ ವಿಷಯವನ್ನು ತಿಳಿಸುತ್ತದೆ. ಹೀಗೆ ವಿಶ್ವಕರ್ಮ ವೀರರು ತಮ್ಮ ಕಲೆಯಲ್ಲಿ ಪರಿಣಿತರಾಗಿರುವಂತೆ ಬೇಟೆಯಲ್ಲಿಯೂ ತಮ್ಮ ಶೌರ್ಯ ಸಾಹಸವನ್ನು ತೋರಿದ್ದಾರೆ.

**ಯುದ್ದದಲ್ಲಿ ಮಡಿದ ವೀರರು:**

ಹಾವೇರಿ ಶಾಸನವೊಂದು[23] 'ಶ್ರೀಮತ್ ಸರ್ವಾಧಿಕಾರಿ ಚೌಡಿಸೆಟ್ಟಿಯರ...ಪರಮ ವಿಶ್ವಾಸಿ ರಾಘವನಾಯ್ಕನು ಹಾನುಗಲಿಯ ನಾಳ್ವಲಿ ಆವೂರನು ಮಂನೆಯ ಜೋಯಿದೇವನವರು ಹಾಯ್ದಲಿ ಕಂಮಾರ ಬೊಂ(ಮೋ)ಜನ ಮಗ ಕೇತೋಜನು ಕ(ಕಾ)ದಿ ಗೆಲ್ದು ಸುರಲೋಕ ಪ್ರಾಪ್ತನಾದ' ಎಂದು ಉಲ್ಲೇಖಿಸುತ್ತದೆ. ಅಂದರೆ ಮನ್ನೆಯ ಜೋವಿದೇವನು ಹಾನಗಲ್ಲಿನ ಮೇಲೆ ಆಕ್ರಮಣ ಮಾಡಿದಾಗ ಕಮ್ಮಾರ ಬೊಂಮ್ಮೋಜನ ಮಗ ಕೇತೋಜನು ಆ ಯುದ್ದದಲ್ಲಿ ಹೋರಾಡಿ ಮರಣ ಹೊಂದಿದ್ದನ್ನು ತಿಳಿಸುತ್ತದೆ.

ಕ್ರಿ.ಶ.1142ರ ಬಾಗಳಿಯ ಶಾಸನವು[24] 'ಬಾಗುಳಿಯ ಬೈ .... ನ ಕಮ್ಮಾರ ಕೊಂಗುಣಿ ಆಚಾರಿಯ ಮಗಂ ಕೊನ್ತಾಚರಿ ನಾಡಾಳಿವನೊಡನೆ ಕಾಳಗಕ್ಕೆ ಕಾದಿ ಸ್ವರ್ಗ್ಗಸ್ತನಾದಂ' ಎಂದು ಉಲ್ಲೇಖಿಸುತ್ತದೆ. ಅಂದರೆ ಕಮ್ಮಾರ ಕೊಂಗುಣಿ ಆಚಾರ್ಯನ ಮಗ ಕೊಂತಾಚಾರಿಯು ವೈರಿಗಳ ಜೊತೆಯಲ್ಲಿ ಹೋರಾಡಿ ಸಾವನ್ನಪ್ಪಿದನು.

ಹಾನಗಲ್ ತಾಲ್ಲೂಕಿನ ಕಲಕೇರಿ ಗ್ರಾಮದ ಕಲ್ಯಾಣಿ ಚಾಳುಕ್ಯ ಎರಡನೆಯ ಜಗದೇಕ ಮಲ್ಲನ ಶಾಸನದಲ್ಲಿ[25] ಉಲ್ಲೇಖಿತವಾಗಿರುವ ಕಮ್ಮಾರ ಸಾಂತೋಜನು ಕಾಗನೆಲೆಯ ಜನರೊಂದಿಗೆ ಹೋರಾಟವೊಂದರಲ್ಲಿ ಹೋರಾಡಿ ಮರಣ ಹೊಂದಿದ್ದನ್ನು ಹೀಗೆ ಹೇಳಿದೆ. 'ಶ್ರೀ ಮನಾಳ್ಪ್ರಭು ಕಲ್ಕೆರುಯ ಕೇತಿ ಸೆಟ್ಟಿಯರು ಸಿರಿವೊಳಲಲು ಕಾಗೆ ನೆಲೆಯವರೊಡನೆ ಕಾದಿ ಸ್ವರ್ಗ್ಗಸ್ತನಾದಲ್ಲಿ ಕಮ್ಮಾರ ಸಾಂತೋಜ ಜಗವಿದಿತವಾದಿ ಕಾದಿ ಸುರಲೋಕ ಪ್ರಾಪ್ತನಾದ' ಎಂದು ಉಲ್ಲೇಖಿಸುತ್ತದೆ.

ಮತ್ತೊಂದು ವೀರಗಲ್ಲು ಪಾಠದಿಂದ ಕುಂಸಿ[26] ಎಂಬ ಊರಿನಲ್ಲಿ ಕಮ್ಮಾರ ಮಲ್ಲೋಜನೆಂಬುವನು ಹೋರಾಡಿ ಮರಣ ಹೊಂದಿದಾಗ ಅಲ್ಲಿನ ಸಾಸಿರ್ವ್ವರು ಆತನ ಶೂರತನಕ್ಕೆ ಮೆಚ್ಚಿ ಭೂಮಿಯನ್ನು ದತ್ತಿಯಾಗಿ ಬಿಟ್ಟಿರುವುದನ್ನು ಹೇಳಿದೆ.

**ತೆರಿಗೆ**

**ಕಮ್ಮಾರ ಮೊದಲಾದ ಐದು ವೃತ್ತಿಯವರನ್ನು ಸಮಾವೇಶಗೊಳಿಸಿ ವಿಧಿಸುತ್ತಿದ್ದ ತೆರಿಗೆ**

ಬಡಗಿ, ಕಮ್ಮಾರ, ಅಕ್ಕಸಾಲಿ, ಕಂಚುಗಾರ ಮತ್ತು ಶಿಲ್ಪಿ ಎಂಬ ಐದು ವಿಧವಾದ ಕೆಲಸಗಾರರನ್ನು ಸಮಾವೇಶಗೊಳಿಸಿ ಪಂಚಾಳರು, ಪಂಚಕಾರುಕರು, ವಿಶ್ವಕರ್ಮರು, ಓಜರು ಎಂಬ ಸಾಮಾನ್ಯ ವಾಚಕಗಳಿಂದ ಅನೇಕ ಶಾಸನಗಳಲ್ಲಿ ಕರೆಯಲಾಗಿದೆ. ಆದ್ದರಿಂದ 'ಪಂಚಾಳತೆರಿಗೆ'[27], 'ಪಂಚಕಾರುಕದೆರೆ'[28], 'ವೋಜವರಿ'[29] ಎಂಬ ಪದಗಳು ಈ ಐದು ವಿಧವಾದ ಕೆಲಸಗಾರರನ್ನು ಒಂದು ಎಂದು ಪರಿಗಣಿಸಿ, ಸಮಾವೇಶಗೊಳಿಸಿ ವಿಧಿಸುತ್ತಿದ್ದ ವೃತ್ತಿ ತೆರಿಗೆ ಎಂಬುದು ಸಹಜವಾಗಿಯೇ ಸ್ಪಷ್ಟವಾಗುತ್ತದೆ.

**ಕಮ್ಮಾರ ಸುಂಕ**

ಕಮ್ಮಾರರ ಮೇಲೆ 'ಕಮ್ಮಾರಿಕೆಯ ದಶವನ್ದ', 'ಕಮ್ಮಾರಸುಂಕ', 'ಕುಲುಮೆದೆರೆ', 'ಕಬ್ಬುನದೆರೆ' ಎಂದು ಬೇರೆ ಬೇರೆ ಹೆಸರುಗಳಲ್ಲಿ ಕಂದಾಯವನ್ನು ವಿಧಿಸಲಾಗುತ್ತಿತ್ತು. ಕಮ್ಮಾರಿಕೆಯ ದಶವನ್ದ ಎಂದರೆ ಕಮ್ಮಾರನ ಸಂಪಾದನೆಯಲ್ಲಿ ಹತ್ತನೆ ಒಂದು ಭಾಗ(1/10)ವನ್ನು ಸುಂಕದ ರೂಪದಲ್ಲಿ ಕೊಡಬೇಕಾಗುತ್ತಿತ್ತು. ಐದು ಮಂದಿ ಕುಶಲಕಾರ್ಮಿಕರಲ್ಲಿ ಕಮ್ಮಾರರು ಅತಿ ಹೆಚ್ಚು ಸುಂಕವನ್ನು ಕೊಟ್ಟ ಉಲ್ಲೇಖವಿದೆ ಎಂದು ಕೆ.ಎಸ್. ಕುಮಾರಸ್ವಾಮಿಯವರು[30] ಅಭಿಪ್ರಾಯಪಡುತ್ತಾರೆ.

**ಕಚ್ಚಾವಸ್ತುವಿನ ಮೇಲೆ ತೆರಿಗೆ**

ಪಂಚವೃತ್ತಿಕಾರರ ಮೇಲೆ ಹಾಕುತ್ತಿದ್ದ ತೆರಿಗೆಗಳ ಬಗೆಗಿನ ಪರಿಭಾಷೆಗಳನ್ನು ಪರೀಕ್ಷಿಸುತ್ತಾ ಹೋಗುವಲ್ಲಿ 'ಕಬ್ಬುನದ ಸುಂಕ'[31], 'ಕಬ್ಬುನ ಹೆರೆ', 'ಕಬ್ಬಿಣದ ಪೊಂಮು' ಎಂಬ ಶಾಸನೋಲ್ಲೇಖಗಳು ಕಮ್ಮಾರರ ಮೇಲೆ ಹಾಕುತ್ತಿದ್ದ ತೆರಿಗೆಗಳಿರಬಹುದು ಅಥವಾ ಕಬ್ಬಿಣದ ಮೇಲೆ ವಿಧಿಸುತ್ತಿದ್ದ ತೆರಿಗೆ ಇರಬಹುದು. ಇದು ಬಹುಶಃ ಕಮ್ಮಾರರು ಕೊಂಡುಕೊಳ್ಳುತ್ತಿದ್ದ ಮೂಲ(ಕಚ್ಚಾ) ವಸ್ತುವಾದ, ಕಬ್ಬಿಣದ

ಮೇಲೆ ವಿಧಿಸುತ್ತಿದ್ದ ತೆರಿಗೆ. ಕ್ರಿ.ಶ.1069ರ ಒಂದು ಶಾಸನದಲ್ಲಿ ಉಕ್ತವಾಗಿರುವ 'ಕಮ್ಮಾರವಿಟ್ಟಿ'[32] ಎಂಬ ಉಕ್ತಿಯು ಕಮ್ಮಾರರು ಬಿಟ್ಟಿ ಕೆಲಸವನ್ನು ಮಾಡಬೇಕಾಗಿದ್ದುದನ್ನು ಹೇಳುತ್ತದೆ.

**ಸಾಂಸ್ಕೃತಿಕ ಸ್ಥಾನಮಾನ**

ಓಜ ಮತ್ತು ಆಚಾರಿ ಎಂಬ ಉಪನಾಮಗಳು ಬಹುಪಾಲು ಶಿಲಾಕುಶಲ ಕೆಲಸಗಾರರ ಹೆಸರುಗಳ ಮೇಲೆ ಹತ್ತುತ್ತವೆ. ಕೆಲವು ಶಿಲ್ಪಿಗಳ ಹೆಸರುಗಳ ಮೇಲೆ ಇವು ಹತ್ತಿರುವುದಿಲ್ಲ. ಈ ಉಪಮಾನಗಳಿಲ್ಲದವನ ತಂದೆ ಅಥವಾ ಮಗನ ಹೆಸರಿನ ಮೇಲೆ ಇವು ಹತ್ತಿರುವುದನ್ನು ಕಾಣುತ್ತೇವೆ. ಹಾಗಾಗಿ ಈ ಓಜ ಮತ್ತು ಆಚಾರಿ ಎಂಬ ಉಪನಾಮಗಳು ನಮ್ಮ ಆಧುನಿಕ ಪೂರ್ವ ಕರ್ನಾಟಕದ ಶಿಲಾಕರ್ಮವನ್ನು ಮಾಡಿದ ಕೆಲಸಗಾರರ ಸಾಮಾನ್ಯ ಲಕ್ಷಣಗಳಾಗಿವೆ. ಈ ಉಪನಾಮಗಳು ಸಾಮಾನ್ಯವಾಗಿ ಎಲ್ಲ ಅಕ್ಕಸಾಲಿಕೆ, ಕಮ್ಮಾರಿಕೆ, ಬಡಗಿತನ, ಕಂಚುಗಾರಿಕೆ, ಕಲ್ಲಿನ ಶಿಲ್ಪಕಾರ್ಯವನ್ನು ಮಾಡಿದ ಕೆಲಸಗಾರರ ಹೆಸರುಗಳ ಮೇಲೆಯೂ ಒಂದೇ ಸಮನಾಗಿ ವೃತ್ತಿಭೇಧವಿಲ್ಲದೆ ಹತ್ತುತ್ತವೆ. ಹೀಗಾಗಿ ಈ ಉಪನಾಮಗಳು ಈ ಐದು ವೃತ್ತಿಯವರನ್ನು ಒಂದು ಸಾಂಸ್ಕೃತಿಕ ಚೌಕಟ್ಟಿಗೆ ಒಳಪಡಿಸುತ್ತವೆ ಎಂದು ಭಾವಿಸಬಹುದು.

ಕ್ರಿ.ಶ.1082 ಕುರ್ತುಕೋಟಿ ಶಾಸನವೊಂದು[33] 'ಪುರಿಕರಪಟ್ಟಣೋದ್ಭವನ ಕಂಟದ ಬಮ್ಮನ ಪುತ್ರನಯ್ಯಣಂ ಮರವೆಸೆದೊಪ್ಪು ವಿಟ್ಟಿಗೆಯ ದನ್ತದ ಚಿತ್ರದ ಶಾಸ್ತ್ರಯುಕ್ತಮಾಗಿರೆ ಬೆಸಗೆಯ್ವ ಕಲುಭರಿವ ಕಮ್ಮರ ವಿನ್ನಣದೋಜೆಗೆಲ್ಲಿಯುಂ ಪರಿಕಿಸೆ ವಿಶ್ವಕರ್ಮ್ಮ ನಿವನಂ ಮಿಗಿಲೆಂಬುದ ಶೇಷಭೂತಳ॥' ಎಂದು ಉಲ್ಲೇಖಿಸುತ್ತದೆ. ಅಂದರೆ ಬಮ್ಮೋಜ ಎಂಬ ಶಿಲ್ಪಿಯ ಮಗ ಅಯ್ಯಣನು ತಾನು ಮರಗೆಲಸದಲ್ಲಿ, ಇಟ್ಟಿಗೆಯ ಕೆಲಸದಲ್ಲಿ, ದಂತದ ಕೆಲಸದಲ್ಲಿ, ಚಿತ್ರದ ಕೆಲಸದಲ್ಲಿ, ಕಲ್ಲಿನ ಮೇಲೆ ಬರೆಯುವುದರಲ್ಲಿ, ಕಮ್ಮಾರಿಕೆಯಲ್ಲಿ ಕೂಡ ನಿಷ್ಣಾತನೆಂದು ಜಾಹೀರುಪಡಿಸುತ್ತಾನೆ. ಇವನ 'ಬಿನ್ನಾಣ' ದ ಓಜಿಕೆಗೆ ಮೆಚ್ಚಿದ 'ಅಶೇಷ ಭೂತಳವೆ' ಇವನನ್ನು 'ವಿಶ್ವಕರ್ಮನಿಗಿಂತ ಮಿಗಿಲು' ಎಂದು ಮೆಚ್ಚುತ್ತದೆಯಂತೆ.ಇದರಿಂದ ಈ ವೃತ್ತಿಗಳು ಪರಸ್ಪರ ಪೂರಕ ಮತ್ತು ಪೋಷಕವಾಗಿದ್ದವು ಹಾಗೂ ಇವು ಒಂದು ಸಾಂಸ್ಕೃತಿಕ ಮೂಲದಿಂದ ಬಂದವುಗಳಾಗಿದ್ದಿರಬೇಕು ಎಂದು ತಿಳಿಯುತ್ತದೆ.

## ಆಕರ ಗ್ರಂಥಗಳು

1. SII XX, ನಂ.20, ಸಿಡೇನೂರು, ಹಿರೇಕೆರೂರು(ತಾ), ಕ್ರಿ.ಶ.1015, ಪು.21.
2. EC XI, ಚಿಮ 71, ಕ್ರಿ.ಶ.1061,ಪು.41
3. ಕನ್ನಡ ವಿ.ವಿ., ಶಾ.ಸಂ.1, ಬಳ್ಳಾರಿ(ಜಿ) ನಂ.23, ಪು.218.
4. ಕನ್ನಡ ವಿ.ವಿ., ಶಾ.ಸಂ.2, ಕೊಪ್ಪಳ(ಜಿ) ನಂ.27, ಕ್ರಿ.ಶ.1082, ಪು.307.
5. SII IX(i), ನಂ.70, ಕುಡತಿನಿ, ಬಳ್ಳಾರಿ(ಜಿ), ಕ್ರಿ.ಶ.971,ಪು.43.
6. ಚ.ಬ.ವಚನ 502, ಆರ್.ಸಿ.ಹಿರೇಮಠ(ಸಂ) 'ಕಂಬಾರಗೇರಿಗೆ ಮಾರಹೋದಡೆ'.
7. ಚಿದಾನಂದಮೂರ್ತಿ ಎಂ., ಕ.ಶಾ.ಸಾಂ.ಅ., ಮೈಸೂರು ವಿ.ವಿ., ಮೈಸೂರು, 1979.
8. ಕನ್ನಡ ವಿ.ವಿ., ಶಾ.ಸಂ.2, ಕೊಪ್ಪಳ(ಜಿ) ನಂ.27, ಕ್ರಿ.ಶ.1082, ಪು.307.
9. SII XV,ನಂ.67, ಲಕ್ಕುಂಡಿ, ಗದಗ(ತಾ), ಕ್ರಿ.ಶ. 1185, ಪು.93.
10. ಚಿದಾನಂದಮೂರ್ತಿ ಎಂ., ಕ.ಶಾ.ಸಾಂ.ಅ., .ಪು.257.
11. EC IV,ಚಾನ 117, ಕ್ರಿ.ಶ.1142, ಪು.68.
12. EC V,ಮೈ 102, ಕ್ರಿ.ಶ.11ನೇ ಶ. ಪು.236.
13. ನಯಸೇನ ವಿರಚಿತ ಧರ್ಮಾಮೃತ, ಗದ್ಯಾನುವಾದ ವೆಂಕಟರಾಮಪ್ಪ ಕೆ., ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು, ಪು.286.
14. ಶಬ್ದಮಣಿದರ್ಪಣ,ಪು.88 (ಮದಗಜವೆರಡರ ಬಾಲದ ಮೊದಲಂ ಪಿಡಿದೆತ್ತಿಯೊತ್ತಿ ನುರ್ಗುತ್ತಿರೆಯಾಸ್ಯದಿನುಗುವ ರಕ್ತಮುರಿಯೆನೆ ತಿದಿಯೊತ್ತುವ ಕಮ್ಮರಂಬೊಲಿರ್ದಿಂ ಭೀಮಂ).
15. ಸಿದ್ದರಾ ವ. 649, ಪು.194.:ಅಕ್ಕನ ವ.66, ಪು.31.:ಬಸವ ವ.197, ಪು.84.
16. ಚೆನ್ನ ಬ.ವ.915, ಪು.433 ('ಲಿಂಗ ಬೀಳಲು ಬಲ್ಲುದೆ? ಭೂಮಿ ತಾಳಲು ಬಲ್ಲುದೆ? ಕಮ್ಮಾರ ಕಡೆದು ಮಾರಿದ, ಬೋಗಾರ ತಂದು ಮಾರಿದ').
17. ಕನ್ನಡ ವಿ.ವಿ., ಶಾ.ಸಂ.1, ಕೊಳಗಲ್ಲು, ಬಳ್ಳಾರಿ(ಜಿ) ನಂ.23, ಪು71.
18. SII IX(i),ನಂ.70, ಕುಡತಿನಿ, ಬಳ್ಳಾರಿ(ಜಿ), ಕ್ರಿ.ಶ.971,ಪು.43.
19. KI VI. 26, ಮತ್ತೂರ. ಹಿರೇಕೆರೂರು(ತಾ), ಕ್ರಿ.ಶ.1138,ಪು.58.
20. EC VII(Old), ಸೊರಬ 340, ಕ್ರಿ.ಶ.1249, ಪು.160.
21. EC VII(Old), ಸೊರಬ 226, ಕ್ರಿ.ಶ.?, ಪು.95.
22. EC XI, ಮೂಗೆ, 39, ಕ್ರಿ.ಶ.1179, ಪು.174.

23. SII XVIII, 239, ಕೆಂಗೊಂಡ, ಹಾವೇರಿ (ತಾ), ಕ್ರಿ.ಶ.1258.ಪು.315.

24. EC IV, ಚಾನ 117, ಕ್ರಿ.ಶ.1142, ಪು.68.

25. SII XX, 113, ಕಲ್ಕೇರಿ, ಹಾನಗಲ್ಲು (ತಾ), ಕ್ರಿ.ಶ. 1146, ಪು.148.

26. EC VII(Old), ಸೊರಬ 86, ಕ್ರಿ.ಶ.1150, ಪು.35.

27. EC V, ಟೀ. ನರಸೀಪುರ, 138.

28. EC VIII, ಹೊಳೆನರಸೀಪುರ 72, ಕ್ರಿ.ಶ.1238, ಪು.40.

29. EC III, ಗುಂಡ್ಲುಪೇಟೆ, 150.

30. ಕುಮಾರಸ್ವಾಮಿ ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು, ಕ.ಸಾ.ಪ.ಬೆಂಗಳೂರು, 1996, ಪು.110

31. EC XII (Old), ಗುಬ್ಬಿ 45, ಕ್ರಿ.ಶ.1233.;EC XVI(Old), ಚಿಕ್ಕನಾಯಕನಹಳ್ಳಿ, 71, ಕ್ರಿ.ಶ.1291. EC VIII, ಅಗೂ 11, ಕ್ರಿ.ಶ.1371.

32. MAR 1932, 16–32,

33. SII XI, ನಂ.127, ಕುರ್ತುಕೋಟಿ, ಗದಗ (ತಾ), ಕ್ರಿ.ಶ.1082, ಪು.149.